# C

**CCE PF**
**UNREVISED**
**FULL SYLLABUS**
**NSR & NSPR**

**ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,**
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2023**

**S.S.L.C. EXAMINATION, MARCH / APRIL, 2023**

## ಮಾದರಿ ಉತ್ತರಗಳು

## MODEL ANSWERS

ದಿನಾಂಕ : 12. 04. 2023 ] **ಸಂಕೇತ ಸಂಖ್ಯೆ : 62-K**

Date : 12. 04. 2023 ] **CODE NO. : 62-K**

# ವಿಷಯ : ತೃತೀಯ ಭಾಷೆ — ಕನ್ನಡ

# Subject : Third Language — KANNADA

**(ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. & ಎನ್.ಎಸ್.ಪಿ.ಆರ್.)**

**(Private Fresh / NSR & NSPR)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **10 × 1 = 10** |
| 1. | ಕನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳ ಸಂಖ್ಯೆ<br>(ಎ) ೧೩ (ಬಿ) ೨೫<br>(ಸಿ) ೯ (ಡಿ) ೪೯<br>***ಉತ್ತರ :*** (ಡಿ) ೪೯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 2. | 'ಗೌರಿಯ ಮುಖ ಕಮಲದಂತೆ ಅರಳಿತು' ಈ ವಾಕ್ಯದಲ್ಲಿರುವ ಅಲಂಕಾರ<br>(ಎ) ಉಪಮಾಲಂಕಾರ (ಬಿ) ರೂಪಕಾಲಂಕಾರ<br>(ಸಿ) ದೃಷ್ಟಾಂತಾಲಂಕಾರ (ಡಿ) ಉತ್ಪ್ರೇಕ್ಷಾಲಂಕಾರ<br>***ಉತ್ತರ :*** (ಎ) ಉಪಮಾಲಂಕಾರ | |
| 3. | 'ಧರ್ಮ' ಈ ಪದದ ವಿರುದ್ಧಾರ್ಥಕ ರೂಪ<br>(ಎ) ದಮ್ಮ (ಬಿ) ಅಧರ್ಮ<br>(ಸಿ) ದರುಮ (ಡಿ) ಅದಮ್ಮ<br>***ಉತ್ತರ :*** (ಬಿ) ಅಧರ್ಮ | |
| 4. | ಹರ್ಷ, ಅಚ್ಚರಿ, ಸಂತಸ, ದುಃಖ, ಕೋಪ ಇತ್ಯಾದಿ ಭಾವನೆಗಳನ್ನು ಬರವಣಿಗೆಯಲ್ಲಿ ವ್ಯಕ್ತಪಡಿಸುವ ಸಂದರ್ಭಗಳಲ್ಲಿ ಬಳಸುವ ಲೇಖನ ಚಿಹ್ನೆ<br>(ಎ) ಭಾವಸೂಚಕ (ಬಿ) ವಿವರಣಾತ್ಮಕ<br>(ಸಿ) ಪೂರ್ಣವಿರಾಮ (ಡಿ) ಅರ್ಧವಿರಾಮ<br>***ಉತ್ತರ :*** (ಎ) ಭಾವಸೂಚಕ | |
| 5. | ಮಕ್ಕಳು ಹಾಲನ್ನು ಕುಡಿಯುತ್ತಾರೆ ಮತ್ತು ಹಣ್ಣನ್ನೂ ತಿನ್ನುತ್ತಾರೆ. ಈ ವಾಕ್ಯವು<br>(ಎ) ಸಾಮಾನ್ಯ ವಾಕ್ಯ (ಬಿ) ಮಿಶ್ರವಾಕ್ಯ<br>(ಸಿ) ಸಂಯೋಜಿತ ವಾಕ್ಯ (ಡಿ) ಅಲಂಕಾರಿಕ ವಾಕ್ಯ<br>***ಉತ್ತರ :*** (ಸಿ) ಸಂಯೋಜಿತ ವಾಕ್ಯ | |
| 6. | ಕೆಳಗಿನವುಗಳಲ್ಲಿ ಸವರ್ಣದೀರ್ಘ ಸಂಧಿಗೆ ಉದಾಹರಣೆಯಾದ ಪದ<br>(ಎ) ಸುರೇಂದ್ರ (ಬಿ) ದೀಪಾಲಂಕಾರ<br>(ಸಿ) ಏಕೈಕ (ಡಿ) ಅತ್ಯಂತ<br>***ಉತ್ತರ :*** (ಬಿ) ದೀಪಾಲಂಕಾರ | |
| 7. | 'ಪ್ರಾಣಿ' – ಪದದ ಬಹುವಚನ ರೂಪ<br>(ಎ) ಪಕ್ಷಿ (ಬಿ) ಪಕ್ಷಿಗಳು<br>(ಸಿ) ಪ್ರಾಣಿಗಳು (ಡಿ) ಮೃಗ<br>***ಉತ್ತರ :*** (ಸಿ) ಪ್ರಾಣಿಗಳು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 8. | ಕೆಳಗಿನವುಗಳಲ್ಲಿ ಅನುಕರಣಾವ್ಯಯಕ್ಕೆ ಉದಾಹರಣೆಯಾಗಿರುವ ಪದ<br>(ಎ) ಬೇಗಬೇಗ (ಬಿ) ಸರಸರ<br>(ಸಿ) ರೀತಿ-ನೀತಿ (ಡಿ) ಕೈಕೊಡು<br>***ಉತ್ತರ :*** (ಬಿ) ಸರಸರ | |
| 9. | 'ಹುಡುಗನನ್ನು' – ಪದವು ಈ ವಿಭಕ್ತಿಗೆ ಉದಾಹರಣೆಯಾಗಿದೆ<br>(ಎ) ಪ್ರಥಮಾ (ಬಿ) ದ್ವಿತೀಯಾ<br>(ಸಿ) ತೃತೀಯಾ (ಡಿ) ಸಪ್ತಮೀ<br>***ಉತ್ತರ :*** (ಬಿ) ದ್ವಿತೀಯಾ | |
| 10. | 'ಗೋದಾವರಿ' – ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ<br>(ಎ) ಅಂಕಿತನಾಮ (ಬಿ) ರೂಢನಾಮ<br>(ಸಿ) ಅನ್ವರ್ಥಕನಾಮ (ಡಿ) ಭಾವನಾಮ<br>***ಉತ್ತರ :*** (ಎ) ಅಂಕಿತನಾಮ | |
| **II.** | **ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :** | **5 × 1 = 5** |
| 11. | ಗುಂಡಪ್ಪನವರ ತಿಮ್ಮ : ಸೂರ್ಯ :: ಬೀಚಿಯವರ ತಿಂಮ : ............ .<br>***ಉತ್ತರ :*** ಬೆಡ್‌ಲ್ಯಾಂಪ್ | |
| 12. | ಉಲ್ಲಾಳದ ರಾಣಿ : ಅಬ್ಬಕ್ಕದೇವಿ :: ಕೆಳದಿಯ ರಾಣಿ : .................... .<br>***ಉತ್ತರ :*** ಚೆನ್ನಮ್ಮ | |
| 13. | ಕರದಲಿ : ಜಪಮಣಿ :: ಬಾಯಲಿ : ......................... .<br>***ಉತ್ತರ :*** ಮಂತ್ರವು | |
| 14. | ಕಳಸ : ಹಿಂದೂ :: ಶಿಲುಬೆ : ......................... .<br>***ಉತ್ತರ :*** ಕ್ರೈಸ್ತ | |
| 15. | ರಾಣಿ ಅಬ್ಬಕ್ಕ ಸೋಲಿಸಿದ್ದು : ಪೋರ್ಚುಗೀಸರನ್ನು :: ಕಿತ್ತೂರು ಚೆನ್ನಮ್ಮ ಸೋಲಿಸಿದ್ದು : ......................... .<br>***ಉತ್ತರ :*** ಬ್ರಿಟಿಷರನ್ನು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **III.** | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ**<br>**(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) :** | **5 × 1 = 5** |
| 16 | ಗೌರಮ್ಮನವರ ಪೂರ್ವಜರು ಯಾವ ಸೀಮೆಯವರು ?<br>***ಉತ್ತರ :***<br>ಗೌರಮ್ಮನವರ ಪೂರ್ವಜರು ವಿಟ್ಲ ಸೀಮೆಯವರು. | |
| 17. | ರಸ ಕವಿತ್ವ ಒಂದೇ ಆದರೂ ಅದರ ರಚನೆಗೆ ಬಳಕೆಯಾಗುತ್ತಿರುವ ಛಂದೋ ಪ್ರಕಾರಗಳು ಯಾವವು ?<br>***ಉತ್ತರ :***<br>ರಸ ಕವಿತ್ವ ಒಂದೇ ಆದರೂ ಅದರ ರಚನೆಗೆ ಬಳಕೆಯಾಗುತ್ತಿರುವ ಛಂದೋ ಪ್ರಕಾರಗಳು ಕಂದ, ವೃತ್ತ, ತ್ರಿಪದಿ, ವಚನ. | |
| 18. | ಬೇರೆಯವರ ಸಾಲಕ್ಕೆ ಯಾವಾಗ ಹೊಣೆಯಾಗಬೇಕೆಂದು ಕವಿ ಸೋಮನಾಥನು ಹೇಳಿದ್ದಾನೆ ?<br>***ಉತ್ತರ :***<br>ತನ್ನ ಕೈಯಿಂದ ದಂಡ ತೆರುವ ಸಾಮರ್ಥ್ಯ ಇರುವವನು ಮಾತ್ರ ಮತ್ತೊಬ್ಬರು ಮಾಡುವ ಸಾಲಕ್ಕೆ ಹೊಣೆಯಾಗಬೇಕು. | |
| 19. | ಧರ್ಮಪದನ ಇನ್ನೊಂದು ಹೆಸರೇನು ?<br>***ಉತ್ತರ :***<br>ಧರ್ಮಪದನ ಇನ್ನೊಂದು ಹೆಸರು ಮುಕುಂದ. | |
| 20. | ಬೀಚಿಯವರು ಓದಲು ಇನ್ನೂ ಆಗಿಲ್ಲವೆಂದು ಹೇಳಿರುವ ಶಿವರಾಮ ಕಾರಂತರ ಕೃತಿ ಯಾವುದು ?<br>***ಉತ್ತರ :***<br>ಬೀಚಿಯವರು ಓದಲು ಇನ್ನೂ ಆಗಿಲ್ಲವೆಂದು ಹೇಳಿರುವ ಶಿವರಾಮ ಕಾರಂತರ ಕೃತಿ ಮರಳಿ ಮಣ್ಣಿಗೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| IV. | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವಿಕೆ.**<br>**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕ ನೀಡುವುದು) :** | **10 × 2 = 20** |
| 21. | ಮಿನಿಪೊಲೀಸ್ ನಗರದ ಪೊಲೀಸರು ಗೊರೂರರನ್ನು ಹೇಗೆ ಉಪಚರಿಸಿದರು ?<br>***ಉತ್ತರ :***<br>ಮಿನಿಪೊಲೀಸ್ ನಗರದ ಟ್ರಾಫಿಕ್ ಪೊಲೀಸನು ಗೊರೂರರನ್ನು ತನ್ನ ಕಾರಿನಲ್ಲಿ ಮನೆಗೆ ಕರೆದುಕೊಂಡು ಹೋದನು. ಅಲ್ಲಿ ಗೊರೂರರಿಗೆ ಬ್ರೆಡ್, ಹಾಲು, ಹಣ್ಣು ಮತ್ತು ಬಿಸ್ಕತ್ತುಗಳನ್ನು ರಾತ್ರಿ ಊಟಕ್ಕೆ ನೀಡಿದನು. ಊಟವಾದ ನಂತರ ಗಾಳಿ ಬೆಳಕು ಬರುವ ಲಾಕಪ್ಪಿನಲ್ಲಿ ಸ್ವಚ್ಛವಾದ ಹಾಸಿಗೆ ನೀಡಿ ಮಲಗಲು ಹೇಳಿದನು. | |
| 22. | ಶರೀಫರ ಬಾಲ್ಯವು ಹಿಂದೂ ಪರಂಪರೆಯೊಂದಿಗೆ ಹೇಗೆ ಬೆರೆತುಹೋಗಿತ್ತು ?<br>***ಉತ್ತರ :***<br>ಶರೀಫರ ಬಾಲ್ಯ ಶಿಶುನಾಳ ಗ್ರಾಮದಲ್ಲಿಯೇ ಕಳೆಯಿತು. ಬಾಲ್ಯದಲ್ಲಿಯೇ ರಾಮಾಯಣ, ಮಹಾಭಾರತಗಳೆಂದರೆ ತುಂಬಾ ಪ್ರೀತಿ, ರಾಮಾಯಣ, ಮಹಾಭಾರತ, ಅಲ್ಲಮಪ್ರಭು ಬಯಲಾಟಗಳಲ್ಲಿ ಭಾಗವಹಿಸುತ್ತಿದ್ದರು. ಜಾತ್ರೆ, ಉತ್ಸವ ಮೊದಲಾದವುಗಳಲ್ಲಿ ಅನುಭಾವ ಕವಿಗಳಾದ ಸರ್ವಜ್ಞ, ನಿಜಗುಣ ಶಿವಯೋಗಿ ಮೊದಲಾದವರ ಕಾವ್ಯವಾಚನ ಮಾಡುತ್ತಿದ್ದರು. ಜನ್ಮ ಮುಸ್ಲಿಂ ಕುಟುಂಬದಲ್ಲಾದರೂ, ಹಿಂದೂ ಪರಂಪರೆಯೊಂದಿಗೆ ಶರೀಫರ ಬಾಲ್ಯ ಬೆರೆತುಹೋಗಿತ್ತು. | |
| 23. | ಗೋವಿಂದಭಟ್ಟರು ಯಾರು ? ಅವರ ಗುಣ ಸ್ವಭಾವಗಳನ್ನು ತಿಳಿಸಿ.<br>***ಉತ್ತರ :***<br>ಗುರು ಗೋವಿಂದ ಭಟ್ಟರು ಶರೀಫರ ಆದರ್ಶ ಗುರುಗಳು ಮತ್ತು ಕಳಸ ಗ್ರಾಮದವರು.<br>ಗುರು ಗೋವಿಂದ ಭಟ್ಟರು ಜ್ಞಾನಿಗಳೂ, ವಿದ್ಯಾವಂತರೂ ಎಂದು ಖ್ಯಾತಿವೆತ್ತವರು ನಗೆಮುಖದ ಪ್ರಸಾದ ವಾಣಿಯ ದಿವ್ಯವ್ಯಕ್ತಿಗಳಾಗಿದ್ದರು. ಇವರು ಶಕ್ತಿಯ ಉಪಾಸಕರು, ಉದಾರ ಹೃದಯಿಗಳು ಆಗಿದ್ದರು. ಮಾನವ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕುಲ ಒಂದೇ ಎಂಬ ಭಾವನೆಯುಳ್ಳವರಾಗಿದ್ದರು. ಜಾತಿ-ಮತಗಳ ಭೇದವೆಂದರೆ ಇವರಿಗಾಗದು. ಇವರು ಯಾವುದೇ ರೀತಿಯ ಭೇದ-ಭಾವಗಳಿಲ್ಲದೆ ಮುಕ್ತವಾಗಿ ವಿದ್ಯಾದಾನ ಮಾಡುತ್ತಿದ್ದರು. ಇವರು ತುಂಬಾ ಶಾಂತ ಮನಸ್ಸಿನ ಗುರುಗಳಾಗಿದ್ದರು. | |
| 24. | ತುಳಜಾಬಾಯಿಯ ದೇಶಪ್ರೇಮ ಮತ್ತು ತ್ಯಾಗವನ್ನು ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ. | |
| | ***ಉತ್ತರ :*** | |
| | ಮಗನನ್ನು ಬಲಿ ಕೊಡುವ ಸಾಧ್ಯತೆಯ ಅರಿವಿದ್ದರೂ ಧೈರ್ಯ ತಂದುಕೊಂಡಳು. ಒಂದು ವರ್ಷದ ಹಿಂದೆ ಈ ಹೋರಾಟದಲ್ಲಿ ತನ್ನ ಪತಿ ಗತಿಸಿದ್ದರೂ ಲೆಕ್ಕಿಸದೆ ತುಳಜಾಬಾಯಿ ತನ್ನ ಮಗನನ್ನು ಆಶೀರ್ವದಿಸಿ ಮೋಹನಪುರದ ಹೋರಾಟಕ್ಕೆ ಶುಭಕೋರಿ ಕಳುಹಿಸಿಕೊಟ್ಟಿದ್ದಾಳೆ. "ಅಯ್ಯೋ ರಾಮಸಿ, ನಿನ್ನ ಕೈಯಲ್ಲಿಯ ಧ್ವಜವನ್ನು ಕಸಿದುಕೊಂಡಿದ್ದಾರೆಯೇ ಇನ್ನೊಂದು ಧ್ವಜವನ್ನು ತಂದಿದ್ದೇನೆ. ತೆಗೆದುಕೊ ಎಂದು ನುಡಿದಳು. ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನೇ ಬಲಿಕೊಟ್ಟಿರುವೆ. ನನ್ನ ಪ್ರಾಣವನ್ನು ತ್ಯಜಿಸಲು ಸಿದ್ಧಳಿದ್ದೇನೆ. ನಾನು ಈ ಧ್ವಜವನ್ನು ಕೆಳಗೆ ಇಡಲಾರೆನೆಂದು ಹೇಳುತ್ತ, ಭಾರತಮಾತೆಗೆ ಜಯವಾಗಲಿ" ಎಂದು ಧ್ವಜವನ್ನು ಎತ್ತಿ ಹಿಡಿದಳು. | |
| 25. | ಶೋಷಣೆಯನ್ನು ವಿರೋಧಿಸುವವರು ಪಡಬೇಕಾದ ಕಷ್ಟ 'ಕಟ್ಟತೇವ ನಾವು' ಕವಿತೆಯಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ ? | |
| | ***ಉತ್ತರ :*** | |
| | ಶೋಷಣೆಯನ್ನು ವಿರೋಧಿಸುವವರು ಕ್ರಾಂತಿಯೆಂಬ ಕೆಂಡದಂತೆ ಸುಡುವ ಕುಂಡವನ್ನು ಹೊರಬೇಕು. ನಡೆಯುವಾಗ ದಾರಿಯ ತುಂಬ ಮುಳ್ಳುಗಳು ಚುಚ್ಚುತ್ತಿರುತ್ತವೆ. ಪರಿಣಾಮವಾಗಿ ಕಾಲುಗಳಿಂದ ರಕ್ತ ಚಿಮ್ಮುತ್ತಿದ್ದರೂ ಇತರರನ್ನು ಬಡಿದೆಬ್ಬಿಸಲು ಹಾಡನ್ನು ಬರೆಯುತ್ತಾರೆ ಎಂದು 'ಕಟ್ಟತೇವ ನಾವು' ಕವಿತೆಯಲ್ಲಿ ಶೋಷಣೆಯನ್ನು ವಿರೋಧಿಸುವವರ ಕಷ್ಟವು ವ್ಯಕ್ತವಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 26. | ಆಂಗ್ಲರು ಆಫ್ರಿಕನ್ನರಲ್ಲಿ ಹರಿವ ನೆತ್ತರೊಂದೆ ಎಂದು ನಿಸಾರ್ ಅಹಮದ್ ಅವರು ಹೇಳಿರುವುದರ ಔಚಿತ್ಯವೇನು ? | |
| | ***ಉತ್ತರ :*** | |
| | ಪಂಚಭೂತಗಳಾದ ಭೂಮಿ, ಆಕಾಶ, ಅಗ್ನಿ, ಜಲ, ಗಾಳಿ ಎಲ್ಲರಿಗೂ ಒಂದೇ ಆಗಿದೆ. 'ಮಾನವ ಜಾತಿ ತಾನೊಂದೆ ವಲಂ' ಎಂಬುದು ಕವಿ ವಾಣಿ. ಧರ್ಮ, ಭಾಷೆ, ಉಡುಗೆ-ತೊಡುಗೆ ಆಹಾರ ಪದ್ಧತಿಗಳು ಬೇರೆಬೇರೆ ಆಗಿದ್ದರೂ ನಾವೆಲ್ಲರೂ ಒಂದೆ. ಆಂಗ್ಲರು ಆಫ್ರಿಕನ್ನರು ಬೇರೆಬೇರೆಯಾಗಿದ್ದರೂ ಸಹಿತ ನಮ್ಮಲ್ಲಿ ಅವರಲ್ಲಿ ಹರಿಯುವ ರಕ್ತ ಒಂದೆ ಆಗಿದೆ. ಅಕ್ಕಿ ಬಿಳಿದು, ರಾಗಿ ಕರಿಯ ಬಣ್ಣದಾಗಿದ್ದರೂ ಅವುಗಳ ಹುಲ್ಲಿನ ಬಣ್ಣ ಒಂದೇ ಆಗಿದೆ. | |
| 27. | ಗ್ರಂಥಾಲಯವನ್ನು ಹೊಕ್ಕಾಗ ಕವಿಗೆ ಆದ ಅನುಭವವನ್ನು ತಿಳಿಸಿ. | |
| | ***ಉತ್ತರ :*** | |
| | ಕವಿ ಗ್ರಂಥಾಲಯವನ್ನು ಹೊಕ್ಕಾಗ ಕಣ್ಣಿನ ದೃಷ್ಟಿಯನ್ನು ಹರಿಸಿದತ್ತ ದೂರ ಪುಸ್ತಕದ ರಾಶಿಗಳನ್ನು ಕಂಡು ಆಶ್ಚರ್ಯಚಕಿತಗೊಂಡರು. ಇವುಗಳಡಿಯಲ್ಲಿ ನಾನು ಧೂಳಿನ ಕಣ. ಗ್ರಂಥಾಲಯದ ಮುಂದೆ ನಿಂತಾಗ ಅಹಂಕಾರ ನಾಶವಾಗಿ ಅಲ್ಪತೆಯ ಅರಿವಾಗುತ್ತದೆ. ಕವಿಗೆ ಗ್ರಂಥಾಲಯದ ರಾಶಿಯ ಮುಂದೆ ನಿಂತಾಗ ಬೇಗ ಹೊರಗೆ ಓಡುವ ಬಯಕೆ ಹೆಚ್ಚಾಯಿತು. ಕವಿಗೆ ಗ್ರಂಥಾಲಯವನ್ನು ನೋಡಿ ಭಯ ಉಂಟಾಯಿತು. | |
| 28. | ಈರಪ್ಪ ಎಂ. ಕಂಬಳಿಯವರಿಗೆ ತಾವು ಆನೆಯಂಬಾರಿ ಏರಿದಂತೆ ಭಾಸವಾಗಲು ಕಾರಣವೇನು ? | |
| | ***ಉತ್ತರ :*** | |
| | ಈರಪ್ಪ ಎಂ. ಕಂಬಳಿಯವರು ಬಸ್ಸನ್ನು ಏರಿದಾಗ ಅದು ಮೇಲೆ-ಒಳಗೆ ಭರ್ತಿ ತುಂಬಿತ್ತು. ಬಸ್ಸು ಥೇಟ್ ಗಬ್ಬದ ಹಂದಿಯಂತೆ ವಾಲಾಡುತ್ತ ಹೊರಟಿತ್ತು. ಜನರೆಲ್ಲ ಬಸ್ಸಿನ ಟಾಪ್ ಮೇಲೆ ಕುಳಿತುಕೊಂಡಿದ್ದರು. ಬಸ್ಸು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ರಸ್ತೆಗೆ ಇಳಿದಾಗ ಸುತ್ತ ನೋಡಿದರು ವಾಹ್! ಆಕಾಶಯಾನ, ಮಜಭೂತಾದ ಆನೆಯಂಬಾರಿ ಏರಿ ಕೂತಂತೆ ಭಾಸವಾಯಿತು. | |
| 29. | ಜಿನೋವದ ಪ್ರವಾಸಿ ಪಿತ್ರೋ ಅಬ್ಬಕ್ಕನನ್ನು ಕುರಿತು ಏನೆಂದು ಬರೆದಿದ್ದಾನೆ ?<br>***ಉತ್ತರ :***<br>ಅಬ್ಬಕ್ಕಳು ಆರ್ಥಿಕ ಶೋಷಣೆಗೆ ತಲೆಬಾಗದ ಸ್ವಾಭಿಮಾನಿಯಾಗಿದ್ದಾಳೆ. ರಾಣಿ ಅಬ್ಬಕ್ಕದೇವಿ ವಿವೇಚನಾಶೀಲಳೂ, ನ್ಯಾಯಪರಳೂ, ಕುಶಲಳು ಆಗಿದ್ದಾಳೆ. ಅನ್ಯಾಯವಾಗಿ ಪಡೆಯುತ್ತಿದ್ದ ವಾರ್ಷಿಕ ಕಪ್ಪವನ್ನು ವಿರೋಧಿಸಿದ್ದಾಳೆಂದು ಪಿತ್ರೋ ಹೇಳಿದ್ದಾನೆ. | |
| 30. | ವಿಶು ಜ್ಞಾನತಪ್ಪಿ ಏಕೆ ಕೆಳಗುರುಳಿದನು ?<br>***ಉತ್ತರ :***<br>ವಿಶು ಶತಪ್ರಯತ್ನ ಮಾಡಿದರೂ ತನ್ನಿಂದ ಕೂಡಿಸಲಾಗದ ಕಲಶವನ್ನು ಅರ್ಧ ಗಂಟೆಯಲ್ಲಿ ಧರ್ಮಪದ ಕೂಡಿಸಿದನು. ವಿಶು ಅವಮಾನದಿಂದ ತಲೆತಗ್ಗಿಸಿದನು. ತನ್ನ ಪ್ರತಿಭೆಗೆ ಇವನು ಮುಳ್ಳಾಗಿ ಬಂದನು. ಮಹಾರಾಜರಿಂದ ಬಿರುದು ಬಾವಲಿಗಳನ್ನು ತನ್ನಿದಿರೇ ಪಡೆಯುತ್ತಾನೆ. ತಾನೀಗ ಕೈಕೆಳಗೆ ಕೆಲಸ ಮಾಡುತ್ತಿದ್ದ ಶಿಲ್ಪಿಗಳ ಮುಂದೆ ಅವಮಾನಿತನಾಗಿದ್ದೇನೆ ಎಂದು ಉದ್ವೇಗಕ್ಕೆ ಒಳಗಾಗಿ ವಿಶು ಜ್ಞಾನ ತಪ್ಪಿ ಕೆಳಗುರುಳಿದನು. | |
| **V.** | **ಸಂದರ್ಭಸಹಿತ ವಿವರಣೆ :** | **4 × 3 = 12** |
| | ಪದ್ಯದ ಹೆಸರು, ಕೃತಿ, ಕರ್ತೃ | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | "ದೇವಿ ನನ್ನ ಅಪರಾಧವನ್ನು ಕ್ಷಮಿಸು."<br>***ಉತ್ತರ :***<br>ಈ ಮಾತನ್ನು ವಿಜಯಲಕ್ಷ್ಮಿ ಬಾಳೇಕುಂದ್ರಿಯವರು ಬರೆದ 'ಜೀವನಧಾರೆ' ಎಂಬ ಕೃತಿಯಿಂದ ಆಯ್ದ 'ಕರ್ನಾಟಕದ ವೀರ ವನಿತೆಯರು' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಈ ಮಾತನ್ನು ಶಿವಾಜಿ ಮಹಾರಾಜರು ಬೆಳವಡಿ ಮಲ್ಲಮ್ಮಾಜಿಗೆ ನುಡಿದನು.<br><br>8–10 ಸರದಾರರೊಂದಿಗೆ ಜಗದಾಂಬೆಯ ದರ್ಶನ ಪಡೆದು ಮರಳುತ್ತಿದ್ದ ಶಿವಾಜಿಯ ಮೇಲೆ ಮಿಂಚಿನಂತೆ ಎರಗಿ ಖಡ್ಗದ ಹೊಡೆತದಿಂದ ಅವರನ್ನೆಲ್ಲ ಮಲ್ಲಮ್ಮಾಜಿ ನೆಲಕ್ಕೆ ಉರುಳಿಸಿದಳು. ಹಠಾತ್ತನೆ ದಾಳಿ ಮಾಡಿದ ರಾಣಿಯನ್ನು ಕಂಡ ಶಿವಾಜಿ ತಲ್ಲಣಗೊಂಡನು. ಶಿವಾಜಿಯು ಕುದುರೆಯಿಂದ ಕೆಳಗೆ ಇಳಿದು ಕೈಜೋಡಿಸಿ "ದೇವಿ ನನ್ನ ಅಪರಾಧವನ್ನು ಕ್ಷಮಿಸು. ನಾನು ನಿನ್ನ ಮಗನೆಂದು ತಿಳಿ" ಎಂದು ಕೇಳಿಕೊಂಡನು.<br><br>ಶಿವಾಜಿಯು ಮಲ್ಲಮ್ಮಾಜಿಗೆ ಕೈಜೋಡಿಸಿ ಕ್ಷಮೆಯನ್ನು ಕೇಳಿದ್ದು ಸ್ವಾರಸ್ಯಕರವಾದ ಸಂಗತಿ. | |
| 32. | "ಆಚಾರವೇ ಸ್ವರ್ಗ! ಅನಾಚಾರವೇ ನರಕ."<br>***ಉತ್ತರ :***<br>ಈ ವಚನದ ಸಾಲನ್ನು ಡಾ. ಎಂ.ಎಂ. ಕಲಬುರ್ಗಿಯವರು ಸಂಪಾದಿಸಿದ 'ಬಸವಣ್ಣನ ವಚನಗಳು' ಎಂಬ ಕೃತಿಯಿಂದ ಆರಿಸಿಕೊಳ್ಳಲಾಗಿದೆ.<br><br>ಈ ಮಾತನ್ನು ವಚನಕಾರರಾದ ಬಸವಣ್ಣನವರು ಮಾನವೀಯ ಮೌಲ್ಯಗಳನ್ನು ಕುರಿತು ಹೇಳಿದ್ದಾರೆ.<br><br>ದೇವಲೋಕ, ಇಹಲೋಕ ಇವೆರಡೂ ಬೇರೆಬೇರೆ ಇಲ್ಲ. ಸತ್ಯವನ್ನು ನುಡಿಯುವುದು ದೇವಲೋಕವಾಗಿದೆ. ಸುಳ್ಳನ್ನು ನುಡಿಯುವುದು. ಇಹಲೋಕವಾಗಿದೆ.ಅದೇ ರೀತಿಯಾಗಿ ಒಳ್ಳೆಯ ನಡವಳಿಕೆಯಿಂದ ಸ್ವರ್ಗ ಸಿಗುತ್ತದೆ. ಕೆಟ್ಟ ನಡವಳಿಕೆಯಿಂದ ನರಕ ಸಿಗುತ್ತದೆ.<br><br>ಬಸವಣ್ಣನವರು ಮನುಷ್ಯ ಜೀವನದಲ್ಲಿ ಹೇಗೆ ಬದುಕಬೇಕು ಎಂದು ಸಂದೇಶ ನೀಡಿರುವುದು ಇಲ್ಲಿಯ ಸ್ವಾರಸ್ಯ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 33. | "ಮುಕ್ತ ಹೃದಯದಿಂದ ವಿದ್ಯಾದಾನ ಮಾಡಿದರು."<br>***ಉತ್ತರ :***<br>ಈ ಮಾತನ್ನು ಆರ್.ಎಸ್. ಸುಂಕದರವರ 'ಶ್ರೀ ಶಿಶುನಾಳ ಶರೀಫ ಸಾಹೇಬರ ಅನುಭಾವ ಗೀತ ಮಂಜರಿ' ಕೃತಿಯಿಂದ ಆಯ್ದ 'ಶಿಶುನಾಳ ಶರೀಫ ಸಾಹೇಬರು' ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>ಈ ಮಾತನ್ನು ಗುರು ಗೋವಿಂದ ಭಟ್ಟರನ್ನು ಕುರಿತು ಲೇಖಕರು ಹೇಳಿದ್ದಾರೆ.<br>ಗುರು ಗೋವಿಂದ ಭಟ್ಟರು ಶಕ್ತಿಯ ಉಪಾಸಕರು ಆಗಿದ್ದರು. ಮಾನವಕುಲ ಒಂದೇ ಎಂಬ ಭಾವನೆಯುಳ್ಳವರು. ಜಾತಿ ಮತಗಳ ಭೇದಭಾವ ಇವರಿಗೆ ಇರಲಿಲ್ಲ. ಆದ್ದರಿಂದ ಸ್ವಜಾತೀಯವನಲ್ಲದ ಮುಸಲ್ಮಾನ ಶಿಷ್ಯನಾದ ಶಿಶುನಾಳ ಶರೀಫರಿಗೆ ಮುಕ್ತಹೃದಯದಿಂದ ವಿದ್ಯಾದಾನ ಮಾಡಿದ್ದಾರೆಂದು ಲೇಖಕರು ಹೇಳಿದ್ದಾರೆ.<br>ಗುರು ಗೋವಿಂದ ಭಟ್ಟರು ಜಾತಿ ಭೇದಭಾವನೆ ಮಾಡದೇ ಶಿಶುನಾಳ ಶರೀಫರಿಗೆ ವಿದ್ಯಾದಾನ ಮಾಡಿದ್ದು ಸ್ವಾರಸ್ಯಕರವಾದ ಸಂಗತಿಯಾಗಿದೆ. | |
| 34. | "ಪರಸತಿ ಪರಧನಕಾಗಿ ಚಿಂತಿಸುತೆ."<br>***ಉತ್ತರ :***<br>ಈ ಸಾಲನ್ನು ಪುರಂದರದಾಸರ 'ಪುರಂದರ ಸಾಹಿತ್ಯ ದರ್ಶನ ಸಂಪುಟ-೧ (ಜೀವನ ದರ್ಶನ)' ಕೃತಿಯಿಂದ ಆಯ್ದ 'ಉದರ ವೈರಾಗ್ಯ' ಎಂಬ ಕೀರ್ತನೆಯಿಂದ ಆಯ್ದುಕೊಳ್ಳಲಾಗಿದೆ.<br>ಈ ಮಾತನ್ನು ಪುರಂದರದಾಸರು ಡಾಂಭಿಕ ಭಕ್ತನು ಪೂಜೆ ಮಾಡುವ ರೀತಿಯನ್ನು ಕುರಿತು ಹೇಳಿದ್ದಾರೆ.<br>ಡಾಂಭಿಕ ಭಕ್ತನು ಕೈಯಲ್ಲಿ ಜಪಮಣಿ ಹಿಡಿದು, ಬಾಯಿಂದ ಮಂತ್ರವನ್ನು ಪಠಿಸುತ, ಅರಿವೆಯಿಂದ ಮುಖವನ್ನು ಮುಚ್ಚಿಕೊಂಡು ಪರಸತಿ, ಪರಧನವನ್ನು ಮನದಲ್ಲಿ ಸ್ಮರಿಸುತ್ತಾನೆ. ನಾನೊಬ್ಬ ಪರಮ ವೈರಾಗ್ಯಶಾಲಿ ಎನ್ನುತ್ತಾನೆ.<br>ಡಾಂಭಿಕ ಭಕ್ತನ ತೋರಿಕೆಯ ಭಕ್ತಿಯ ಪ್ರದರ್ಶನವನ್ನು ನಾವಿಲ್ಲಿ ಕಾಣಬಹುದಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| VI. | **ಐದು-ಆರು ವಾಕ್ಯಗಳಲ್ಲಿ ಉತ್ತರಿಸುವುದು :** | **4 × 3 = 12** |
| | ವಿಷಯಕ್ಕೆ | 2 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 35. | ಮಿನಿಪೊಲೀಸ್ ನಗರದಲ್ಲಿ ಗೊರೂರರು ತಪ್ಪಿಸಿಕೊಂಡ ಪ್ರಕರಣವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.<br>***ಉತ್ತರ :***<br>ಅಮೆರಿಕಾದ ಮಿನಿಪೊಲೀಸ್ ನಗರಕ್ಕೆ ಗೊರೂರರು ತಮ್ಮ ಮಿತ್ರನನ್ನು ನೋಡಲು ಹೋಗಿದ್ದರು. ಮಿತ್ರನು ಅಲ್ಲಿ ಇರಲಿಲ್ಲ. ದಾರಿಯಲ್ಲಿ ಪರಿಚಿತರೊಬ್ಬರು ಸಿಕ್ಕರು. ಅವರನ್ನು ಮೋಟಾರಿನಲ್ಲಿ ಕೂರಿಸಿಕೊಂಡು ಹೋದರು. ಗೊರೂರರು ದಾರಿಯಲ್ಲಿ ಒಂದೆಡೆ ಕಾರಿನಿಂದ ಇಳಿದು ಅದೇ ದಾರಿಯಲ್ಲಿ ಹಿಂದಿರುಗುವಾಗ ರಾತ್ರಿ 2 ಗಂಟೆಗೆ ನನ್ನನ್ನು ಕರೆದುಕೊಂಡು ಹೋಗಬೇಕೆಂದು ಕಾರಿನವನಿಗೆ ಹೇಳಿದ್ದರು. ಬಣ್ಣದ ಬಲ್ಬುಗಳು, ಕಮಾನುಗಳು, ಕಿಟಕಿಗಳ ದೀಪಾಲಂಕಾರ ಇವುಗಳನ್ನೆಲ್ಲ ನೋಡುತ್ತ ಮಿತ್ರರು ಬಂದು ನನ್ನನ್ನು ಕರೆದುಕೊಂಡು ಹೋಗಲು ಗೊತ್ತು ಮಾಡಿಕೊಂಡಿದ್ದ ಸ್ಥಳವನ್ನು ಬಿಟ್ಟು ಆಚೆ-ಈಚೆ ಹೊರಟು ಹೋದರು. ಆ ನಂತರ ಏನೂ ಮಾಡಿದರೂ ಆ ಸ್ಥಳ ಸಿಗಲಿಲ್ಲ. ಹೀಗೆ ಮಿನಿಪೊಲೀಸ್ ನಗರದಲ್ಲಿ ಗೊರೂರರು ದಾರಿ ತಪ್ಪಿಸಿಕೊಂಡರು. | |
| 36. | ಕುಲಕರ್ಣಿ ಅವರಿಗೂ ರಾಮಸಿಂಗನಿಗೂ ನಡೆದ ಸಂಭಾಷಣೆಯನ್ನು ಸಂಗ್ರಹಿಸಿ ಬರೆಯಿರಿ.<br>***ಉತ್ತರ :***<br>ಕುಲಕರ್ಣಿ ಮತ್ತು ರಾಮಸಿಂಗ ಇವರಿಬ್ಬರ ಸಂಭಾಷಣೆ ತುಂಬಾ ಸ್ವಾರಸ್ಯಕರವಾಗಿದೆ. ರಾಮಸಿಂಗನು ಕುಲಕರ್ಣಿಗೆ ಇಂತಹ ಕವಡಿ ಕಿಮ್ಮತ್ತಿನ ಗುಲಾಮರಿಗೆ ಮುಂದಾಳುಗಳೇಕೆ? ನನ್ನಂತಹ ದೇಶಾಭಿಮಾನಿ ಹುಡುಗನೊಬ್ಬನು ಇದ್ದರೆ ಸಾಕು ಎಂದು ನುಡಿದಾಗ, ಕುಲಕರ್ಣಿ ಬಾಯಿ ಮುಚ್ಚು ಎಂದರು. ಅದಕ್ಕೆ ಪ್ರತಿಯಾಗಿ ಬಾಯಿ ಬಿಚ್ಚೆಂದಾಗ ಬಿಚ್ಚಲು, ಮುಚ್ಚೆಂದಾಗ ಮುಚ್ಚಲು ಈ ಬಾಯಿ ನಿಮ್ಮಂತಹ ಗುಲಾಮರ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಬಾಯಿಯಲ್ಲ. ಆಗ ಸತ್ಯಾಗ್ರಹಿಗಳು, ಘೋಷಣೆ ಹಾಕಿದರು. ಅದಕ್ಕೆ ಕುಲಕರ್ಣಿ ಸುಮ್ಮನೆ ಇಲ್ಲಿಂದ ಹೊರಟು ಹೋಗಿರಿ ಎಂದು ನುಡಿದರು. ನನ್ನ ಸಿಟ್ಟು ನೆತ್ತಿಗೇರಿದೆ. ಅದಕ್ಕೆ ರಾಮಸಿಂಗ ಅದನ್ನು ಇಳಿಸುವ ಮಾಂತ್ರಿಕರು ಇಲ್ಲಿದ್ದಾರೆ. ಕುಲಕರ್ಣಿ ಕೈಯಲ್ಲಿ ಏನಿದೆ ನೋಡಿದಿರಾ ? ರಾಮಸಿಂಗ ರಾಷ್ಟ್ರಧ್ವಜವನ್ನು ತೋರಿಸುವನು. ಕುಲಕರ್ಣಿ ಪಿಸ್ತೂಲಿನ ಶಕ್ತಿಯ ಮುಂದೆ ನಿಲ್ಲುವೆಯಾ ರಾಮಸಿಂಗ ಧ್ವಜದ ಶಕ್ತಿಯ ಮುಂದೆ ನಿಲ್ಲಬಲ್ಲಿರಾ ? ಕುಲಕರ್ಣಿ ಸುಮ್ಮನೆ ಧ್ವಜವನ್ನು ಕೆಳಗಿಡು ಎಂದಾಗ ರಾಮಸಿಂಗನ ದೇಹದಲ್ಲಿ ಪ್ರಾಣ ಇರುವವರೆಗೆ ಧ್ವಜವನ್ನು ಕೆಳಗಿಡಲಾರೆ ಎಂದನು. 'ಮಾಡು ಇಲ್ಲವೇ ಮಡಿ' ಗಾಂಧೀಜಿ ಹೇಳಿಕೊಟ್ಟ ಮಂತ್ರ ಎಂದು ರಾಮಸಿಂಗ ನುಡಿದನು. ರಾಮಸಿಂಗನು ಕುಲಕರ್ಣಿಗೆ "ಬ್ರಿಟಿಷರೆ ಭಾರತವನ್ನು ಬಿಟ್ಟು ತೊಲಗಿರಿ" ಎಂದು ಹೇಳಲು ನಾವು ಬಂದಿದ್ದೇವೆ. ಎಂದಾಗ ಕುಲಕರ್ಣಿ ಇಲ್ಲಿಂದ ಚದುರಿರಿ ಎನ್ನುತ್ತಾನೆ. ಅದನ್ನು ರಾಮಸಿಂಗನು ಒಪ್ಪದಿದ್ದಾಗ ಗಾಳಿಯಲ್ಲಿ ಗುಂಡು ಹಾರಿಸುವನು. ಆದರೂ ಚದುರದಿದ್ದಾಗ ರಾಮಸಿಂಗನಿಗೆ ಗುಂಡು ಹಾರಿಸುವನು. | |
| 37. | ಸಿ.ಪಿ.ಕೆ.ಯವರು ಗ್ರಂಥಾಲಯದ ಮುಂದೆ ವಿನಮ್ರಭಾವದಿಂದ ನಿಂತ ರೀತಿಯನ್ನು ನೀವು ಹೇಗೆ ಪ್ರಶಂಸಿಸುವಿರಿ ಎಂಬುದನ್ನು ವಿವರಿಸಿ.<br>***ಉತ್ತರ :***<br>ಸಿ.ಪಿ.ಕೆ.ಯವರು ಗ್ರಂಥರಾಶಿಯ ಮುಂದೆ ನಿಂತಾಗ ಗ್ರಂಥಗಳ ಸಾಲುಗಳನ್ನು ನೋಡಿ ಆಶರ್ಯಗೊಳ್ಳುತ್ತಾರೆ. ಗ್ರಂಥಗಳ ಸಾಲುಗಳ ಅಡಿಯಲ್ಲಿ ನಾ ಧೂಳಿನ ಕಣವೆಂದು ಹೇಳುವ ಲೇಖಕರು ಗುಣವನ್ನು ಮೆಚ್ಚಿಕೊಳ್ಳುತ್ತೇವೆ. ತನ್ನ ಅಹಂಕಾರವು ಇಲ್ಲಿ ನುಚ್ಚು ನೂರಾಯಿತು ಎಂದು ಹೇಳುತ್ತಾರೆ. ಪುಸ್ತಕಾಲಯವನ್ನು ಪ್ರವೇಶ ಮಾಡಿದಾಗ ಬೇಗ ಹೊರಡುವ ಬಯಕೆ ಹೆಚ್ಚಾಯಿತೆನ್ನುತ್ತಾರೆ. ಇಲ್ಲಿ ಹಿರಿಬಾಹುಗಳ ಅವಶೇಷಗಳಿವೆ. ಮಹಾಭಾರತ ಯುದ್ಧದಲ್ಲಿ ಶ್ರೀಕೃಷ್ಣನ ವಿರಾಟರೂಪವನ್ನು ನೋಡಿ ಅರ್ಜುನ ತತ್ತರಿಸಿದಂತೆ ಕವಿ ಇಲ್ಲಿ ಮೂಕವಿಸ್ಮಿತರಾಗಿ ನಿಲ್ಲುತ್ತಾರೆ. ಕವಿ ಸಿ.ಪಿ.ಕೆ.ಯವರು ಗ್ರಂಥ ರಾಶಿಯ ಮುಂದೆ ತೋರಿದ ವಿನಮ್ರತಾ ಗುಣವನ್ನು ನಾವಿಲ್ಲಿ ಕಾಣಬಹುದಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 38. | ಪುರಂದರದಾಸರ ಕೀರ್ತನೆಯಲ್ಲಿ ಡಂಭಾಚಾರದ ಭಕ್ತಿಯ ಸ್ಪಷ್ಟ ಚಿತ್ರಣವು ಹೇಗೆ ಚಿತ್ರಿತವಾಗಿದೆ ? | |
| | ***ಉತ್ತರ :*** | |
| | ಪುರಂದರದಾಸರ ಕೀರ್ತನೆಯಲ್ಲಿ ಡಂಭಾಚಾರದ ಭಕ್ತಿಯ ಸ್ಪಷ್ಟ ಚಿತ್ರಣವು ಸುಂದರವಾಗಿ ಚಿತ್ರಿತವಾಗಿದೆ. ಭಕ್ತನಿಗೆ ದೇವರ ಮೇಲೆ ಸ್ವಲ್ಪವೂ ಭಕ್ತಿಯಿಲ್ಲ ಉದಯಕಾಲದಲ್ಲಿ ಎದ್ದು ಸ್ನಾನ ಮಾಡಿ ಗಡಗಡ ನಡುಗುತ್ತ ಡಾಂಭಿಕ ಭಕ್ತಿಯನ್ನು ತೋರಿಸುತ್ತಿದ್ದಾನೆ. ಮನಸ್ಸಿನಲ್ಲಿ ಮದ, ಮತ್ಸರ, ಕಾಮ, ಕ್ರೋಧಗಳು ತುಂಬಿಕೊಂಡಿವೆ. ಕಂಚುಗಾರನ ಬಿಡಾರದ ಹಾಗೆ ಕಂಚು ಹಿತ್ತಾಳೆಯ ಪ್ರತಿಮೆಗಳನ್ನು ಜೋಡಿಸಿ ಅದು ಮಿಂಚಲು ಹಲವು ದೀಪಗಳನ್ನು ಹಚ್ಚಿ ವಂಚನೆಯಿಂದ ಪೂಜೆ ಮಾಡುತ್ತಾನೆ. ಕೈಯಲ್ಲಿ ಜಪಮಣಿಯನ್ನು ಹಿಡಿದು, ಬಾಯಿಂದ ಮಂತ್ರಪಠಿಸುತ್ತ ಅರಿವೆಯ ಮುಸುಕನ್ನು ಮುಖಕ್ಕೆ ಹಾಕಿಕೊಂಡು ಪರಸತಿಯರನ್ನು ಮನದಲ್ಲಿ ನೆನೆಯುತ್ತ ಪರಮ ವೈರಾಗ್ಯಶಾಲಿ ಎಂದೆನಿಸಿಕೊಳ್ಳುತ್ತಿದ್ದಾನೆ. ನಾಟಕ ಸ್ತ್ರೀಯರಂತೆ ಬಯಲ ಡಂಭವ ತೋರುತ್ತಿದ್ದಾನೆ. | |
| **VII.** | **ಕವಿಗಳ / ಸಾಹಿತಿಗಳ ಕಾಲ, ಜನ್ಮಸ್ಥಳ, ಕೃತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | **2 × 3 = 6** |
| | ಜನ್ಮಸ್ಥಳ, ಕಾಲಕ್ಕೆ | 1 ಅಂಕ |
| | ಕೃತಿಗೆ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 39. | *ಬೀchi :* | |
| | ***ಉತ್ತರ :*** | |
| | ಬೀchi ಅವರು ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ೧೯೧೩ ರಲ್ಲಿ ಜನಿಸಿದರು. ಇವರ ಕೃತಿಗಳು 'ಕೆನೆಮೊಸರು', 'ನೀವು ಕೇಳಿದಿರಿ', 'ಹನ್ನೊಂದನೆಯ ಅವತಾರ', 'ಸೈಕಾಲಜಿಸ್ಟ್ ಸಾರಂಗಪಾಣಿ' 'ಬೆಳ್ಳಿತಿಂಮ ನೂರೆಂಟು ಹೇಳಿದ', 'ಅಂದನಾ ತಿಂಮ' 'ತಿಂಮನ ತಲೆ', 'ಕನ್ನಡ ಎಂಮ್ಮೆ', 'ಸಂಪನ್ನರಿದ್ದಾರೆ ಎಚ್ಚರಿಕೆ'. 'ಸಾಹುಕಾರ ಸುಬ್ಬಮ್ಮ' 'ನನ್ನ ಭಯಾಗ್ರಫಿ'. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 40. | *ಸತೀಶ ಕುಲಕರ್ಣಿ :*<br>**ಉತ್ತರ :**<br>ಸತೀಶ ಕುಲಕರ್ಣಿಯವರು ಧಾರವಾಡ ಜಿಲ್ಲೆಯ ಕುಂದಗೋಳ ತಾಲ್ಲೂಕಿನ ಗುಡಗೇರಿಯಲ್ಲಿ ೧೩. ೦೭. ೧೯೫೧ ರಂದು ಜನಿಸಿದರು. ಇವರ ಕೃತಿಗಳು 'ಬೆಂಕಿ ಬೇರು', 'ನೆಲದ ನೆರಳು', 'ವಿಕ್ಷಿಪ್ತ', 'ಒಡಲಾಳ ಕಿಚ್ಚು', 'ವಿಷಾದಯೋಗ', 'ಛಿನ್ನ', 'ಗಾಂಧೀಗಿಡ', 'ಕಂಪನಿ ಸವಾಲ್', 'ಸಮುದ್ರ ಸೂರ್ಯ' ಮತ್ತು 'ಗುರುವರ್ಯ ಗೋಕಾಕರು' (ಸಂಪಾದಿತ ಕೃತಿ) 'ಒದೋಳಗಿನ ಒದು' (ವಿಮರ್ಶಾ ಕೃತಿ). | |
| **VIII.** | **ಗಾದೆಯ ಮಾತನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | **1 × 3 = 3** |
| 41. | "ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ."<br>**ಅಥವಾ**<br>"ದೇಶ ಸುತ್ತು ಕೋಶ ಓದು." | |
| | ಗಾದೆಯ ಮಹತ್ವ | 1 ಅಂಕ |
| | ಗಾದೆಯ ಅರ್ಥ / ವಿವರಣೆ | 1 ಅಂಕ |
| | ಭಾಷಾಶೈಲಿಗೆ / ಉದಾಹರಣೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| **IX.** | **ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | **1 × 4 = 4** |
| | ವಿಷಯಕ್ಕೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 42. | ಗಾಂಧೀಜಿಯವರು ಕೊಡಗಿನಲ್ಲಿ ತಂಗಿದ್ದಾಗ ನಡೆದ ಸಂಗತಿಗಳನ್ನು ವಿವರಿಸಿ.<br>**ಅಥವಾ**<br>'ಕೊಡಗಿನ ಗೌರಮ್ಮನವರು ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು' ಈ ಹೇಳಿಕೆಯನ್ನು ನಿಮ್ಮ ಮಾತುಗಳಲ್ಲಿ ಸಮರ್ಥಿಸಿ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ***ಉತ್ತರ :*** | |
| | ಗಾಂಧೀಜಿಯವರು ೧೯೩೩ ನೇ ವರ್ಷದ ಕೊನೆಯಲ್ಲಿ ಕರ್ನಾಟಕ ಪ್ರವಾಸ ಕೈಗೊಂಡು ಕೊಡಗಿನಲ್ಲಿ ಎರಡು ದಿನಗಳ ಕಾಲ ತಂಗಿದ್ದರು. ಆ ಕಾಲದಲ್ಲಿ ಕೊಡಗಿನ ಗೌರಮ್ಮನವರು ೨೧ನೇ ವಯಸ್ಸಿನಲ್ಲಿ ಉಪವಾಸ ಸತ್ಯಾಗ್ರಹ ಮಾಡಿ, ಗಾಂಧೀಜಿಯವರು ತಮ್ಮಂತಹ ಸಾಧಾರಣ ಕುಟುಂಬದವರ ಮನೆಗೂ ಬರಬೇಕೆಂದು ಹಠವನ್ನು ಹಿಡಿದಿದ್ದರು. ಅದನ್ನು ಗಾಂಧೀಜಿಯವರು ಸಾಕಾರಗೊಳಿಸಿದರು. ಗಾಂಧೀಜಿಯವರು ಗೌರಮ್ಮನವರ ಮನೆಗೆ ತೆರಳಿ ಕೊಡಗಿನ ಕಿತ್ತಳೆ ಹಣ್ಣು ನೀಡಿ ಎಳೆ ಚೆಲುವೆಯ ಉಪವಾಸವನ್ನು ಅಂತ್ಯಗೊಳಿಸಿದರು. ಗಾಂಧೀಜಿಯವರು ಮನೆಗೆ ಬಂದಾಗ ಗೌರಮ್ಮನವರು ಸ್ವಾತಂತ್ರ್ಯ ಸಂಗ್ರಾಮ, ಹರಿಜನೋದ್ಧಾರ ಸಂಬಂಧ ನಿಧಿಗೆ ತನ್ನ ಕೊರಳಿನ ಮಂಗಳಸೂತ್ರ, ಕಿವಿಯ ಓಲೆ, ಮೂಗು ಬೊಟ್ಟನ್ನು ಬಿಟ್ಟು ಉಳಿದೆಲ್ಲಾ ಒಡವೆಗಳನ್ನು ಮಹಾತ್ಮರ ಕೈಗೆ ಕೊಟ್ಟರು. | |
| | **ಅಥವಾ** | |
| | ಗೌರಮ್ಮ ಸುತ್ತಮುತ್ತಲಿನ ಬದುಕಿನಲ್ಲಿ ಕಂಡು ಕೇಳಿದ ಘಟನೆಗಳು ಮತ್ತು ಅವುಗಳ ಅನುಭವದ ಹಿನ್ನೆಲೆಯಲ್ಲಿ ಮಹಿಳಾಲೋಕದ ಕನಸುಗಳ ಆದರ್ಶಚಿತ್ರವನ್ನು ತಮ್ಮ ಕಥೆಗಳಲ್ಲಿ ನೀಡಲು ಪ್ರಯತ್ನಿಸಿದರು. ಗೌರಮ್ಮನವರ ೨೧ ಕಥೆಗಳಲ್ಲಿಯೂ ಎಲ್ಲಾ ಮಾನವ ಜೀವಿಗಳ ಸ್ವಾತಂತ್ರ್ಯ ಸದಭಿರುಚಿ ಹಾಗೂ ಮನದಾಳದ ಅನಿಸಿಕೆಗಳಿಗೆ ಪೂರಕವಾಗಿ ನಿಲ್ಲಬಲ್ಲರು. ಗೌರಮ್ಮನವರು ಆರೋಗ್ಯಕರ ನಿಲುವಿನ, ಜಾತ್ಯಾತೀತ ಮನೋಧರ್ಮದ, ಮಾನವೀಯ ವಿಚಾರಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಹೊಂದಿದ್ದರು. ಅಪಾರ ಜೀವನ ಪ್ರೀತಿಯ ಕಲೆಗಾರ್ತಿ ಆಗಿದ್ದರು. ಭಾರತೀಯ ಸಮಾಜದಲ್ಲಿ ಮಹಿಳೆಯರು ತಮ್ಮದೇ ಆದ ಸಂಕೋಲೆಗಳು ಮತ್ತು ನಿಸ್ಸಹಾಯಕತೆಯ ಇಕ್ಕಟ್ಟಿನಲ್ಲಿ ನರಳುತ್ತಿರುವ ರೀತಿಯನ್ನು ಗ್ರಹಿಸಿದರು. ಸಮಾಜದಲ್ಲಿನ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಕ್ರೌರ್ಯದ ನಾನಾ ಮುಖಗಳ ಸೂಕ್ಷ್ಮವಾದ ಅನಾವರಣವನ್ನು ತಮ್ಮ ಕಥೆಗಳಲ್ಲಿ ಮಾಡಿದರು. ಬದುಕಿನ ಬಗ್ಗೆ ಕಾಳಜಿಯನ್ನು ಹೊಂದಿದ್ದ ಗೌರಮ್ಮ ಆ ಕಾಲದ ಮಹಿಳಾ ಸದಭಿರುಚಿಯ ದ್ಯೋತಕವಾಗಿದ್ದರು. | |
| **X.** | **ಪದ್ಯಭಾಗ ಪೂರ್ಣ ಮಾಡುವುದು : (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)** | **1 × 4 = 4** |
| 43. | ಅಪ್ಪರಿಲ್ಲದೆ ........................................................<br>..................................................................<br>...................................................... ಕರುಣೇಸೊ<br>**ಅಥವಾ**<br>ಮೂಡಮೋಡ ..................................................<br>..................................................................<br>..................................................... ಮುಗಿಲಲ್ಲಿ<br>***ಉತ್ತರ :***<br>ಅಪ್ಪರಿಲ್ಲದೆ ಸೊಪ್ಪಾದೊ ಈ ಭೂಮಿ<br>ಸಪ್ಪೆ ದಂಟಾದೊ ದನಕರ – ಮಳೆರಾಯ<br>ಅಪ್ಪ ನೀ ಬಂದು ಕರುಣೇಸೊ<br>**ಅಥವಾ**<br>ಮೂಡಮೋಡ ನೋಡೋ ಮೋಡದ ಚಂದನೋಡೋ<br>ಗೋಡೆಗೆ ಕಪ್ಪ ಬಳಿದ್ಹಂಗೆ – ಮಳೆರಾಯ<br>ಬೋರಾಡು ತಾವೆ ಮುಗಿಲಲ್ಲಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| XI. | **ಪದ್ಯಭಾಗದ ಸಾರಾಂಶ ಬರೆಯುವುದು :** | **1 × 4 = 4** |
| | ವಿವರಣೆಗೆ | 3 ಅಂಕಗಳು |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| 44. | ದೇವಲೋಕ, ಮರ್ತ್ಯಲೋಕವೆಂಬುದು ಬೇರಿಲ್ಲ, ಕಾಣಿರೋ !<br>ಸತ್ಯವ ನುಡಿವುದೇ ದೇವಲೋಕ, ಮಿಥ್ಯವ ನುಡಿವುದೇ ಮರ್ತ್ಯಲೋಕ !<br>ಆಚಾರವೇ ಸ್ವರ್ಗ, ಅನಾಚಾರವೇ ನರಕ<br>ಕೂಡಲಸಂಗಮದೇವಾ ನೀವೇ ಪ್ರಮಾಣು.<br><br>***ಉತ್ತರ :***<br><br>ಬಸವಣ್ಣನವರು ಸ್ವರ್ಗ-ನರಕಗಳ ಕಲ್ಪನೆಯನ್ನು ಸ್ಪಷ್ಟಪಡಿಸುತ್ತಾ ಮನುಷ್ಯರು ಪರಿಶುದ್ಧ ಮನಸ್ಸಿನಿಂದ ದೈವೀಕೃಪೆಗೆ ಪಾತ್ರರಾಗುವ ಮಾರ್ಗವನ್ನು ಈ ಪದ್ಯದಲ್ಲಿ ಹೇಳಿದ್ದಾರೆ.<br><br>ದೇವಲೋಕ ಮತ್ತು ಇಹಲೋಕ ಇವೆರಡೂ ಬೇರೆ ಬೇರೆ ಇಲ್ಲ. ಸತ್ಯವನ್ನು ನುಡಿಯುವುದೇ ದೇವಲೋಕವಾಗಿದೆ. ಸುಳ್ಳನ್ನು ನುಡಿಯುವುದೇ ಇಹಲೋಕವಾಗಿದೆ. ಒಳ್ಳೆಯ ನಡತೆಯೇ ಸ್ವರ್ಗವಾಗಿದೆ. ಕೆಟ್ಟ ನಡವಳಿಕೆಯೇ ನರಕವಾಗಿದೆ. ಇದಕ್ಕೆ ಕೂಡಲಸಂಗಮ ದೇವನು ಸಾಕ್ಷಿಯಾಗಿರುತ್ತಾನೆಂದು ಬಸವಣ್ಣನವರು ಇಲ್ಲಿ ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| XII. | **ಗದ್ಯಭಾಗವನ್ನು ಓದಿಕೊಂಡು, ಪ್ರಶ್ನೆಗಳಿಗೆ ಉತ್ತರಿಸುವುದು :** | |
| | **(ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ)** | **1 × 5 = 5** |
| 45. | ಮಂದಾಕಿನೀ ಮತ್ತು ಸೋನಗಂಗಾ ಎಂಬ ನದಿಗಳ ಸಂಗಮದಲ್ಲಿ ಸೋನ ಪ್ರಯಾಗ ಎಂಬ ಪುಟ್ಟ ಊರು ಇದೆ. ಇಲ್ಲಿಂದ ಗೌರಿಕುಂಡ ಎಂಬ ಹಳ್ಳಿಗೆ ಹೋಗಿ ಅಲ್ಲಿಂದ ಕೇದಾರ ಪರ್ವತ ಹತ್ತಬೇಕು. ಗೌರಿ ಕುಂಡಕ್ಕೆ 'ಗೋಕುಂಡ' ಎಂಬ ಇನ್ನೊಂದು ಹೆಸರು ಇದೆ. ಕೇದಾರ ಪರ್ವತದ ತಪ್ಪಲಲ್ಲಿ 'ಗೋಮುಖ'ದಿಂದ ಸತತವಾಗಿ ಹಬೆಯಾಡುವ ಬಿಸಿನೀರು ಹರಿದು ಬಂದು ಕುಂಡದಲ್ಲಿ ಬೀಳುವುದು ಇಲ್ಲಿಯ ವಿಶೇಷತೆ. ಈ ಸ್ಥಳದಲ್ಲಿಯೇ ಪಾರ್ವತಿ ಶಿವನನ್ನು ಪತಿಯಾಗಿ ಪಡೆಯಲು ತಪಸ್ಸು ಮಾಡಿದ್ದಳಂತೆ. | |
| | ಗೌರಿಕುಂಡದಿಂದ ಕೇದಾರ ಹದಿನೈದು ಕಿಲೋಮೀಟರ್‌ಗಳ ದಾರಿ. ಕೇದಾರ ಪರ್ವತ ಶ್ರೇಣಿಗಳನ್ನು 'ರುದ್ರಹಿಮಾಲಯ' ಎಂದು ಕರೆಯುತ್ತಾರೆ. ಕೇದಾರ ದೇವಾಲಯ ಬಹುಸುಂದರವಾಗಿದೆ. ಪುರಾಣಗಳ ಪ್ರಕಾರ ವೇದವ್ಯಾಸ ಮಹರ್ಷಿಗಳ ಉಪದೇಶದಂತೆ ಪಾಂಡವರು ಇಲ್ಲಿ ತಪಸ್ಸು ಮಾಡಿ ಈ ದೇವಸ್ಥಾನವನ್ನು ಕಟ್ಟಿದರು. ಹಾಗಾಗಿ ದೇವಸ್ಥಾನದ ಒಳಗೋಡೆಗಳಲ್ಲಿ ಪಾಂಡವರ ವಿಗ್ರಹಗಳನ್ನು ಅಳವಡಿಸಿದ್ದಾರೆ. ಗರ್ಭಗುಡಿಯ ಒಳಗೆ ಕೇದಾರೇಶ್ವರ. ಅದು ಲಿಂಗವೂ ಅಲ್ಲ, ಮೂರ್ತಿಯೂ ಅಲ್ಲ. ಬರೇ ಒಂದು ಒರಟು ಕಲ್ಲಿನ ಬಂಡೆ. | |
| | ಎ) ಗೌರಿಕುಂಡಕ್ಕಿರುವ ಇನ್ನೊಂದು ಹೆಸರೇನು ? | |
| | ***ಉತ್ತರ :*** ಗೌರಿಕುಂಡಕ್ಕಿರುವ ಇನ್ನೊಂದು ಹೆಸರು ಗೋಕುಂಡ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ಬಿ) ಕೇದಾರ ದೇವಸ್ಥಾನದ ಒಳಗಡೆ ಪಾಂಡವರ ವಿಗ್ರಹಗಳನ್ನು ಅಳವಡಿಸಲು ಕಾರಣವೇನು ? | |
| | ***ಉತ್ತರ :*** ಪಾಂಡವರು ಇಲ್ಲಿ ತಪಸ್ಸು ಮಾಡಿ ಈ ದೇವಸ್ಥಾನಗಳನ್ನು ಕಟ್ಟಿದ್ದರಿಂದ ಕೇದಾರ ದೇವಸ್ಥಾನದ ಒಳಗಡೆ ಪಾಂಡವರ ವಿಗ್ರಹಗಳನ್ನು ಅಳವಡಿಸಿದ್ದಾರೆ. | |
| | ಸಿ) ಸೋನ ಪ್ರಯಾಗ ಎಂಬ ಊರು ಎಲ್ಲಿದೆ ? | |
| | ***ಉತ್ತರ :*** ಮಂದಾಕಿನೀ ಮತ್ತು ಸೋನಗಂಗಾ ಎಂಬ ನದಿಗಳ ಸಂಗಮದಲ್ಲಿ ಸೋನ ಪ್ರಯಾಗ ಎಂಬ ಪುಟ್ಟ ಊರು ಇದೆ. | |
| | ಡಿ) ಕೇದಾರ ಪರ್ವತದ ತಪ್ಪಲಿನ ವಿಶೇಷತೆ ಏನು ? | |
| | ***ಉತ್ತರ :*** ಕೇದಾರ ಪರ್ವತದ ತಪ್ಪಲಿನ 'ಗೋಮುಖ' ದಿಂದ ಸತತವಾಗಿ ಹಬೆಯಾಡುವ ಬಿಸಿನೀರು ಹರಿದು ಬಂದು ಕುಂಡದಲ್ಲಿ ಬೀಳುವುದು ಇಲ್ಲಿಯ ವಿಶೇಷತೆಯಾಗಿದೆ. | |
| | ಇ) ಕೇದಾರ ಪರ್ವತ ಶ್ರೇಣಿಗಳನ್ನು ಏನೆಂದು ಕರೆಯುತ್ತಾರೆ ? | |
| | ***ಉತ್ತರ :*** ಕೇದಾರ ಪರ್ವತ ಶ್ರೇಣಿಗಳನ್ನು 'ರುದ್ರಹಿಮಾಲಯ' ಎಂದು ಕರೆಯುತ್ತಾರೆ. | |
| **XIII.** | **ಪ್ರಬಂಧ ಬರವಣಿಗೆ :** | **1 × 5 = 5** |
| 46. | ಗಣಕಯಂತ್ರ<br>**ಅಥವಾ**<br>ಶಾಲೆಗಳಲ್ಲಿ ಕ್ಷೀರಭಾಗ್ಯ ಯೋಜನೆಯ ಮಹತ್ವ | |
| | ಪೀಠಿಕೆ | 1 ಅಂಕ |
| | ವಿಷಯ ಜೋಡಣೆ | 2 ಅಂಕಗಳು |
| | ಉಪಸಂಹಾರ | 1 ಅಂಕ |
| | ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| **XIV.** | **ಪತ್ರ ಲೇಖನ ಬರೆಯುವುದು :** | **1 × 5 = 5** |
| 47. | ನಿಮ್ಮನ್ನು ಬೆಂಗಳೂರಿನ ನಿವಾಸಿ 'ಸ್ವರಾ' ಎಂದು ಭಾವಿಸಿಕೊಂಡು, ಮೈಸೂರಿನಲ್ಲಿರುವ ಚಿಕ್ಕಮ್ಮನವರಿಗೆ ನಿಮ್ಮ ಹುಟ್ಟುಹಬ್ಬಕ್ಕೆ ಆಹ್ವಾನಿಸಿ, ಒಂದು ಪತ್ರವನ್ನು ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ಧಾರವಾಡದ ನಿವಾಸಿ 'ಪರಮೇಶ್ವರ' ಎಂದು ಭಾವಿಸಿಕೊಂಡು, ನಿಮ್ಮ ಊರಿನಲ್ಲಿ ಶುದ್ಧ ಕುಡಿಯುವ ನೀರಿನ ಘಟಕದ ವ್ಯವಸ್ಥೆ ಮಾಡುವ ಕುರಿತು ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೊಂದು ಮನವಿ ಪತ್ರವನ್ನು ಬರೆಯಿರಿ. | |
| | *ವೈಯಕ್ತಿಕ ಪತ್ರ :* | |
| | ಇಂದ, ವಿಳಾಸ, ಸಂಬೋಧನೆ, ದಿನಾಂಕ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಗೆ ವಿಳಾಸ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| | **ಅಥವಾ** | |
| | *ವ್ಯಾವಹಾರಿಕ ಪತ್ರ :* | |
| | ಇಂದ, ಗೆ, ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ, ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ವಿನ್ಯಾಸ, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |